# ಹರಿಕಥಾಮೃತಸಾರ - ೧೭

## ಸ್ವಗತಸ್ವಾತಂತ್ರ್ಯ ಸಂಧಿ

ಹರಿಕಥಾಮೃತಸಾರ ಗುರುಗಳ | ಕರುಣದಿಂದಾಪನಿತು ಪೇಳುವೆ |
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||

ಸ್ವಗತ ಸ್ವಾತಂತ್ರಿಯ ಗುಣವ ಹರಿ | ತೆಗೆದು ಬ್ರಹ್ಮಾದ್ಯರಿಗೆ ಕೊಟ್ಟುದು |
ಭೃಗುಮುನಿಪ ಪೇಳಿದನು ಇಂದ್ರದ್ಯುಮ್ನ ಕ್ಷಿತಿಪನಿಗೆ ||

ಪರಮವಿಷ್ಣು ಸ್ವತಂತ್ರ ಮಾಯಾ | ತರುಣಿ ವಕ್ಷಸ್ಥಳನಿವಾಸಿಯು |
ಸರಸಿಜೋದ್ಭವಪ್ರಾಣರೀರ್ವರು ಸಚಿವರೆನಿಸುವರು ||
ಸರ್ವಕರ್ಮಗಳಲ್ಲಿ ತತ್ಕ್ರಿಯಾರುರಗಭೂಷಣಹಂಕೃತಿತ್ರಯ |
ಕರೆಸುವಮರೇಂದ್ರಾರ್ಕಮುಖರಿಂದ್ರಿಯಪರೆನಿಸುವರು || ||೧೭-೦೧||

ಈ ದಿವೌಕಸರಂತೆ ಕಲಿ ಮೊದಲಾದ ದೈತ್ಯರು ಸರ್ವದೇಹದಿ |
ತೋದಕರು ತಾವಾಗಿ ವ್ಯಾಪಾರಗಳ ಮಾಡುವರು ||
ವೇಧನಂದದಿ ಕಲಿಯಹಂಕಾರಾಧಿಪಾಧಮ ಮಧುಕೈಟಭ |
ಕ್ರೋಧಿಶಂಬರಮುಖರು ಮನಸಿಗೆ ಸ್ವಾಮಿಯೆನಿಸುವರು || ||೧೭-೦೨||

ದೇವತೆಗಳೋಪಾದಿ ನಿತ್ಯದಿ | ಏವಮಾದಿ ಸ್ವನಾಮದಿಂದಲಿ |
ಯಾವದಿಂದ್ರಿಯಗಳೊಳು ವ್ಯಾಪಾರಗಳ ಮಾಡುವರು ||
ಸೇವಕರ ಸೇವಾನುಗುಣ ಫಲವೀವ ನೃಪನಂದದಲಿ ತನ್ನ ಸ್ವ |
ಭಾವಸ್ವಾತಂತ್ರಿಯ ವಿಭಾಗವ ಮಾಡಿ ಕೊಟ್ಟ ಹರಿ || ||೧೭-೦೩||

ಅಗಣಿತ ಸ್ವಾತಂತ್ರಿಯವ ನಾಲ್ಬಗೆ ವಿಭಾಗವ ಮಾಡಿ ಒಂದನು |
ತೆಗೆದು ದಶವಿಧಗೈಸಿ ಪಾದರೆ ಪಂಚಪ್ರಾಣನಲಿ ||
ಮೊಗಚತುಷ್ಟಯನೊಳು ಸಪಾದೈದುಗುಣವಿರಿಸಿದ ಮತ್ತೆ ದಶವಿಧ |
ಯುಗಳ ಗುಣವನು ಮಾಡಿ ಎರಡು ಸದಾಶಿವನೊಳಿಟ್ಟ || ||೧೭-೦೪||

ಪಾಕಶಾಸನ ಕಾಮರೊಳು ಸಾರ್ಧೈಕವಿಟ್ಟ ದಶೇಂದ್ರಿಯರ ಸುದಿ |
ವೌಕಸಾದ್ಯರೊಳೊಂದು ಯಾವಜ್ಜೀವರೊಳಗೊಂದು ||
ನಾಲ್ಕುವರೆ ಕಲ್ಯಾದಿದೈತ್ಯಾನೀಕಕಿತ್ತನು ಎರಡು ತ್ರಿವಿಧ ವಿ |
ವೇಕಗೈಸಿಂದಿರೆಗೆ ಒಂದೆರಡಾತ್ಮತನ್ನೊಳಗೆ || ||೧೭-೦೫||

ಈ ವಿಧದಿ ಸ್ವಾತಂತ್ರ್ಯತತ್ತ್ವವ | ದೇವಮಾನವದಾನವರೊಳು ರ |
ಮಾವಿನೋದಿ ವಿಭಾಗ ಮಾಡಿಟ್ಟಲ್ಲಿ ರಮಿಸುವನು |
ಮೂವರೊಳಗಿದ್ದವರ ಕರ್ಮವ | ತಾ ವಿಚಾರವಗೈಸದಲೆ ಕ |
ಲ್ಪಾವಸಾನಕೆ ಕೊಡುವನಾಯಾಸವರವರ ಗತಿಯ || ||೧೭-೦೬||

ಆಲಯಗಳೊಳಗಿಪ್ಪ ದೀಪಜ್ವಾಲಿವರ್ತಿಗಳನುಸರಿಸಿ ಜನ |
ರಾಲಿಗಳಿಗೊಪ್ಪುವತೆರದಿ ಹರಿತೋರ್ಪ ಸರ್ವತ್ರ ||
ಕಾಲಕಾಲದಿ ಶ್ರೀಧರಾ ದುರ್ಗಾಲಲನೆಯರ ಕೂಡಿ ಸುಖಮಯ |
ಲೀಲೆಗೈಯ್ಯಲು ತ್ರಿಗುಣಕಾರ್ಯಗಳಹವು ಜೀವರಿಗೆ || ||೧೭-೦೭||

ಇಂದ್ರಿಯಗಳಿಂ ಮಾಳ್ಪ ಕರ್ಮದ್ವಂದ್ವಗಳ ತನಗರ್ಪಿಸಲು ಗೋ |
ವಿಂದ ಪುಣ್ಯವ ಕೊಂಡು ಪಾಪವ ಭಸ್ಮವನೆ ಮಾಳ್ಪ ||
ಇಂದಿರೇಶನು ಭಕ್ತಜನರನ | ನಿಂದಿಸುವರೊಳಗಿಪ್ಪ ಪುಣ್ಯವ |
ತಂದು ತನ್ನವಗೀವ ಪಾಪಗಳವರಿಗುಣಿಸುವನು || ||೧೭-೦೮||

ಹೊತ್ತು-ಹೊತ್ತಿಗೆ ಪಾಪಕರ್ಮ ಪ್ರವರ್ತಕರ ನಿಂದಿಸದೆ ತನಗಿಂ |
ದುತ್ತಮರ ಗುಣಕರ್ಮಗಳ ಕೊಂಡಾಡದಲೆ ಇಪ್ಪ ||
ಮರ್ತ್ಯರಿಗೆ ಗೋಬ್ರಾಹ್ಮಣಸ್ತ್ರೀಹತ್ಯ ಮೊದಲಾದಖಿಳದೋಷಗ |
ಳಿತ್ತಪನು ಸಂದೇಹಪಡಸಲ್ಲಖಿಳಶಾಸ್ತ್ರಮತ || ||೧೭-೦೯||

ತನ್ನ ಸ್ವಾತಂತ್ರ್ಯ-ಗುಣಗಳ ಹಿರಣ್ಯ-ಗರ್ಭಾದ್ಯರಿಗೆ ಕಲಿಮುಖ |
ದಾನವರ ಸಂತತಿಗೇ ಅವರಧಿಕಾರವನುಸರಿಸಿ ||
ಪುಣ್ಯ-ಪಾಪ-ಗಳೀವ ಬಹುಕಾರುಣ್ಯ-ಸಾಗರನಲ್ಪ ಶಕ್ತಿಗ |
ಳುಣ್ಣಲರಿಯದೇ ಇರಲು ಉಣಗಲಿಸಿದನು ಸರ್ವರಿಗೆ || ||೧೭-೧೦||

ಸತ್ಯವಿಕ್ರಮ ಪುಣ್ಯಪಾಪ ಸಮಸ್ತರಿಗೆ ಕೊಡಲೋಸುಗದಿ ನಾ |
ಲ್ವತ್ತುಭಾಗವ ಮಾಡಿ ಲೇಶಾಂಶವನು ಜನಕೀವ ||
ಅತ್ಯಲ್ಪ ಪರಮಾಣುವಿಗೆ ಸಾಮರ್ಥ್ಯವನು ತಾ ಕೊಟ್ಟು ಸ್ಥೂಲಪ |
ದಾರ್ಥಗಳ ಉಂಡುಣಿಪ ಸರ್ವದ ಸರ್ವಜೀವರಿಗೆ || ||೧೭-೧೧||

ತಿಮಿರತರಣಿಗಳೇಕದೇಶದಿ ಸಮನಿಸಿಪ್ಪವೆ ಎಂದಿಗಾದರು
ಭ್ರಮಣ ಚಳಿಬಿಸಿಲಂಜಿಕೆಗಳುಂಟೇನೋ ಪರ್ವತಕೆ ||
ಅಮಿತಜೀವರೊಳಿದ್ದು ಲಕುಮೀರಮಣ ವ್ಯಾಪಾರಗಳ ಮಾಡುವ |
ಕಮಲಪತ್ರ ಸರೋವರಗಳೊಳಿಪ್ಪ ತೆರನಂತೆ || ||೧೭-೧೨||

ಅಂಬುಜೋದ್ಭವ ಮುಖ್ಯಸುರ ಕಲಿ।ಶಂಬರಾದಿ ಸಮಸ್ತದೈತ್ಯಕ ।
ದಂಬಕನುದಿನ ಪುಣ್ಯಪಾಪವಿಭಾಗವನೆ ಮಾಡಿ ॥
ಅಂಬುಧಿಯ ಜಲವನು ಮಹಾಘಟ।ಬಿಂಬರಿತು ತುಂಬುವ ತೆರದಿ ಪ್ರತಿ ।
ಬಿಂಬರೊಳು ತಾನಿದ್ದು ಯೋಗ್ಯತೆಯಂತೆ ಫಲವೀವ ॥ ॥೧೭-೧೩॥

ಇನಿತು ವಿಷ್ಣುರಹಸ್ಯದೊಳು ಭೃಗು।ಮುನಿಪ ಇಂದ್ರದ್ಯುಮ್ನಗರುಹಿದು ।
ದನು ಬುಧರು ಕೇಳುವದು ನಿತ್ಯದಿ ಮತ್ಸರವ ಬಿಟ್ಟು ॥
ಅನುಚಿತೋಕ್ತಿಗಳಿದ್ದರೆಯು ಸರಿ।ಗಣನೆ ಮಾಡದಿರೆಂದು ವಿದ್ವ ।
ಜ್ಜನೆಗೆ ವಿಜ್ಞಾಪನೆಯ ಮಾಡುವೆ ವಿನಯಪೂರ್ವಕದಿ ॥ ॥೧೭-೧೪॥

ವೀತಭಯ ವಿಶ್ವೇಶ ವಿಧಿಪಿತ । ಮಾತುಳಾಂತಕ ಮಧ್ವವಲ್ಲಭ ।
ಭೂತಭಾವನನಂತಭಾಸ್ಕರತೇಜ ಮಹರಾಜ ॥
ಗೌತಮರ ಮಡದಿಯನು ಕಾಯ್ದ।ನಾಥರಕ್ಷಕ ಗುರುತಮ ಜಗ ।
ನ್ನಾಥವಿಠ್ಠಲ ತನ್ನ ನಂಬಿದ ಭಕುತರನೆ ಪೊರೆವ ॥ ॥೧೭-೧೫॥

oooooooooooooooooooooooooooooooo